ಸಸಿಗಳಂತೆ ಕಾಣುವ ಎಲೆಗಳಿಂದಾಗಿ ಈ ಮರ ನೇರವಾಗಿ ಹಿಡಿದ ಬೃಹತ್ತಾದ ಛತ್ರಿಯಂತೆ ಕಾಣುತ್ತದೆ ಹಾಗೂ ಇದು ಮರಕ್ಕೊಂದು ವಿಶಿಷ್ಟವಾದ, ವಿಭಿನ್ನವಾದ ಚಹರೆ ನೀಡಿದೆ. ಈ ಆಕಾರ ಮಳೆ ಕಡಿಮೆ ಇರುವ ಅತಿ ಉಷ್ಣ ಪ್ರದೇಶದಲ್ಲೂ ಬದುಕಲು ಈ ಮರ ಕಂಡುಕೊಂಡ ಒಂದು ವಿಧಾನ! ಹೀಗೆ ಒತ್ತೊತ್ತಾಗಿರುವ ರೆಂಬೆ–ಕೊಂಬೆ, ಎಲೆಗಳು ಮರದಲ್ಲಿನ ನೀರಿನಂಶ ಬೇಗ ಆವಿಯಾಗುವುದನ್ನು ತಡೆಯುತ್ತವೆ. ಬಹಳ ಕಾಲ ನೀರಿನಂಶ ಹಿಡಿದಿಟ್ಟುಕೊಂಡು ಮರ ಜೀವದಿಂದಿರಲು ಸಹಕರಿಸುತ್ತವೆ.

ಸದಾ ಹಸಿರಾಗಿರುವ ಈ ಮರ ಸಾಧಾರಣವಾಗಿ ಮೂವತ್ತಮೂರರಿಂದ ಮೂವತ್ತೊಂಬತ್ತು ಅಡಿ ಎತ್ತರವಿರುತ್ತದೆ. ಆಯುಸ್ಸೇನೂ ಕಡಿಮೆಯಿಲ್ಲ – ಸುಮಾರು ಮುನ್ನೂರರಿಂದ ಆರುನೂರ ಐವತ್ತು ವರ್ಷ ಬದುಕುತ್ತದೆ! 1835ರಲ್ಲಿ ಸೊಕೋಟ್ರ ದ್ವೀಪ ಸಮೂಹದ ಭೌಗೋಳಿಕ ಸಮೀಕ್ಷೆ ನಡೆಸಿದಾಗ, ಲೆಫ್ಟಿನೆಂಟ್ ಜೇಮ್ಸ್ ರೇಮಂಡ್ ವೆಲ್ಸ್ಟೆಡ್ ಮೊದಲ ಬಾರಿಗೆ ಈ ಮರಗಳ ಕುರಿತು ವಿವರಿಸಿದರು. ಅವುಗಳಿಗೆ 'ಟೆರೋಕಾರ್ಪಸ್ ಡ್ರೇಕೊ' ಎಂಬ ಹೆಸರನ್ನಿತ್ತರು. 1880ರಲ್ಲಿ ಸ್ಕಾಟ್ಲೆಂಡ್‌ನ ಸಸ್ಯಶಾಸ್ತ್ರಜ್ಞ ಐಸಾಕ್ ಬೈಲಿ ಬಾಲ್ಫೋರ್, ಇದರ ಔಪಚಾರಿಕ ವಿವರಣೆ ನೀಡಿ 'ಡ್ರಸೀನಾ ಸಿನ್ನಬಾರಿ' ಎಂದು ಮರು ನಾಮಕರಣ ಮಾಡಿದ. ಸುಮಾರು ಅರವತ್ತರಿಂದ ನೂರು ಡ್ರಸೀನಾ ಪ್ರಭೇದಗಳಲ್ಲಿ 'ಡ್ರಸೀನಾ ಸಿನ್ನಬಾರಿ' ಗುಂಪಿಗೆ ಸೇರಿದ ಆರು ಪ್ರಭೇದಗಳು ಮಾತ್ರ ಮರಗಳಾಗಿ ಬೆಳೆಯುತ್ತವೆ.



**ಬಿಡಿಸಿದ ಕೊಡೆ ಆಕಾರದ ಮರಗಳು ಕಲ್ಪವೃಕ್ಷದಂತೆ ಬಹು ಉಪಯೋಗಿ**

## ಉಪಕಾರಿ ಡ್ರ್ಯಾಗನ್

ಡ್ರ್ಯಾಗನ್ ಎಂದೊಡನೆ ಬೆಂಕಿಯನ್ನು ಉಸಿರಾಡುವ, ಬೆಂಕಿಯನ್ನೇ ಉಗುಳುವ ವಿಷಕಾರಿ ಸರ್ಪದ ಕಲ್ಪನೆ ಮೂಡುತ್ತದೆ. ಆದರೆ ಈ 'ಮರಡ್ರ್ಯಾಗನ್' ಮನುಷ್ಯ, ಪ್ರಾಣಿ, ಪಕ್ಷಿಗಳಿಗೆ ಬಹು ಉಪಕಾರಿ. ಇದರ ರಕ್ತ ವರ್ಣದ ರಸ/ರಾಳವು 'ಡ್ರೇಕೊ' ಎಂಬ ಔಷಧೀಯ ದ್ರವ್ಯವನ್ನು ಹೊಂದಿದ್ದು, ಅದನ್ನು ಸೊಕೋಟ್ರಾದ ನಿವಾಸಿಗಳು, ಅರಬ್ಬರು, ಗ್ರೀಕರು, ರೋಮನ್ನರು ಗಾಯವಾದಾಗ ರಕ್ತ ಹೆಪ್ಪುಗಟ್ಟಿಸಿ ಗಾಯವನ್ನು ಬೇಗ ಮಾಯುವಂತೆ ಮಾಡಲು ಬಳಸುತ್ತಿದ್ದರು. ಚರ್ಮ ರೋಗಗಳನ್ನು ನಿವಾರಿಸಲು, ವಾಯು ಪ್ರಕೋಪ, ಹೊಟ್ಟೆ ಹುಣ್ಣು, ಬಾಯಿ ಹುಣ್ಣು ತಡೆಯಲು, ದೇಹದೊಳಗಿನ ರಕ್ತಸ್ರಾವ ತಡೆಗಟ್ಟಲು, ಕೀವು, ನಂಜು ನಿಯಂತ್ರಿಸಲು, ಅತಿಸಾರ ನಿಲ್ಲಿಸಲು, ಜ್ವರದ ತಾಪ ಕಡಿಮೆ ಮಾಡಲು ಡ್ರ್ಯಾಗನ್ ಬ್ಲಡ್ ಟ್ರೀಯ ರಸ ಬಳಸುತ್ತಾರೆ. ಇದರ ಬೇರುಗಳನ್ನು ಸಂಧಿವಾತದ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಆದ್ದರಿಂದ ಇದೊಂದು 'ಸರ್ವ ರೋಗ ನಿವಾರಕ' ಮದ್ದೆಂದು ಸೊಕೋಟ್ರ ವಾಸಿಗಳು ನಂಬುತ್ತಾರೆ!

ಟೂತ್ ಪೇಸ್ಟ್, ವಾರ್ನಿಷ್, ಲಿಪ್‌ಸ್ಟಿಕ್ ತಯಾರಿಕೆಯಲ್ಲಿಯೂ ಡ್ರ್ಯಾಗನ್ ಬ್ಲಡ್ ಟ್ರೀ ಬಳಕೆಯಾಗುತ್ತದೆ. ಅಮೃತ ಶಿಲೆ, ಮಣ್ಣಿನಿಂದ ಮಾಡಿದ ವಸ್ತುಗಳಿಗೆ ಬಣ್ಣಹಾಕಲು ಹಾಗೂ ಇನ್ನಿತರ ಹಲವು ಕೈಗಾರಿಕಾ ಉತ್ಪನ್ನಗಳ ತಯಾರಿಕೆಯಲ್ಲೂ ಬಳಸಲಾಗುತ್ತದೆ. ಹಾಗೆಯೇ ಇದು ರಸವಿದ್ಯೆ, ಮ್ಯಾಜಿಕ್, ಮಾಟ–ವಾಮಾಚಾರಗಳಲ್ಲೂ ಬಳಕೆಯಾಗುತ್ತದಂತೆ! ಇದರ ಎಲೆಗಳನ್ನು ಹಗ್ಗ ತಯಾರಿಸಲು ಉಪಯೋಗಿಸುತ್ತಾರೆ. ಈ ಮರಗಳ ನೆರಳಿನಲ್ಲಿ ಅಳಿವಿನಂಚಿನಲ್ಲಿರುವ ಅನೇಕ ಪಶು–ಪಕ್ಷಿ ಪ್ರಭೇದಗಳು ಹಾನಿಕಾರಕ ಸುಡು ಬಿಸಿಲಿನಿಂದ ರಕ್ಷಣೆ ಪಡೆಯುತ್ತವೆ. ಇದರ ಕಿತ್ತಲೆಕೆಂಪು ಬಣ್ಣದ ಹಣ್ಣು ಹಕ್ಕಿಗಳಿಗೆ ಆಹಾರ.

## ಬ್ರದರ್ಸ್ ಬ್ಲಡ್ ಟ್ರೀ

ಡ್ರಸೀನಾ ಸಿನ್ನಬಾರಿ ಸೊಕೋಟ್ರ ಡ್ರ್ಯಾಗನ್ ಟ್ರೀ ಎಂದೂ ಗುರುತಿಸಲಾಗುವ ಈ ಮರಕ್ಕಿರುವ ಇನ್ನೊಂದು ಹೆಸರು 'ಬ್ರದರ್ಸ್ ಬ್ಲಡ್ ಟ್ರೀ'. ಈ ಹೆಸರಿಗೆ ಕಾರಣ ಯೆಮೆನ್ ದೇಶದ ಒಂದು ದಂತಕಥೆ. ಅದರ ಪ್ರಕಾರ, ಕೈನ್ ಹಾಗೂ ಎಬೆಲ್ ಎಂಬ ಸಹೋದರರು ಸೊಕೋಟ್ರಾದ ಮೊದಲ ಮೂಲ ನಿವಾಸಿಗಳು. ಅವರ ನಡುವಿನ ಕಲಹದಲ್ಲಿ ಎಬೆಲ್‌ನನ್ನು ಕೈನ್ ಕೊಲ್ಲುತ್ತಾನೆ. ಆಗ ಎಬೆಲ್ ದೇಹದಿಂದ ಹರಿದ ರಕ್ತದಿಂದ ಹುಟ್ಟಿದ ಮರವೇ ಡ್ರ್ಯಾಗನ್ಸ್ ಬ್ಲಡ್ ಟ್ರೀ. ಆದ್ದರಿಂದ ಇದನ್ನು ಬ್ರದರ್ಸ್ ಬ್ಲಡ್ ಟ್ರೀ ಎಂದೂ ಕರೆಯುತ್ತಾರೆ.

## ಅಳಿವಿನಂಚಿನಲ್ಲಿರುವ ಮರ

ಜನಸಂಖ್ಯಾ ಸ್ಫೋಟ, ಕೈಗಾರಿಕೀಕರಣ, ಅನಿಯಂತ್ರಿತ ಪಶು ಆಹಾರ ಸಂಗ್ರಹಣೆ, ಜಾನುವಾರು ಮೇಯಿಸುವಿಕೆ ಮುಂತಾದ ಕಾರಣಗಳಿಂದ ಹಾಗೂ ಪರಿಸರದ ಮೇಲಿನ ಮಾನವನ ನಿರಂತರ ದಾಳಿಯಿಂದ ಉಂಟಾಗುತ್ತಿರುವ ಪರಿಸರ ಅಸಮತೋಲನದ ಪರಿಣಾಮಗಳಾದ ಸುಂಟರಗಾಳಿ, ಬಿರುಗಾಳಿಯಂತಹ ಪ್ರಕೃತಿ ವಿಕೋಪಗಳಿಂದಾಗಿ ಡ್ರ್ಯಾಗನ್ ಮರಗಳು ಈಗ ಅಳಿವಿನಂಚಿನಲ್ಲಿವೆ.

ಸೊಕೋಟ್ರ ದ್ವೀಪ ಸಮೂಹವನ್ನು ವಿಶ್ವದ ಇನ್ನೂರು ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಒಂದೆಂದು ಗುರುತಿಸಲಾಗಿದೆ. ಡ್ರ್ಯಾಗನ್ಸ್ ಬ್ಲಡ್ ಟ್ರೀಯನ್ನು ಸಂರಕ್ಷಿಸಬೇಕಾದ ಒಂದು ಬಹು ಮುಖ್ಯ ತಳಿ ಎಂದು ಪರಿಗಣಿಸಲಾಗಿದೆ.

ಹೆಸರಿನಲ್ಲಿ ಡ್ರ್ಯಾಗನ್ ಇದ್ದರೂ ಇದು ಮನುಷ್ಯನಿಗೆ ಉಪಕಾರಿಯಾದ ಮರ. ಮನುಷ್ಯ ಅದರ ಪಾಲಿಗೆ ಡ್ರ್ಯಾಗನ್ ಆಗಬಾರದಷ್ಟೆ!

ಪ್ರತಿಕ್ರಿಯಿಸಿ: feedback@sudha.co.in

